ಅಧ್ಯಯನಕ್ಕಾಗಿ ವಿಮರ್ಶಾ ಕ್ಷೇತ್ರವನ್ನು ಆರಿಸಿಕೊಂಡ ಅಂದಯ್ಯ ಅರವಟಗಿಮಠ ವಚನ ಸಂಶೋಧನೆಯತ್ತಲೂ ಗಮನ ಹರಿಸಿದ್ದಾರೆ. ಕೃಷಿ, ಸಂಚಾರ, ಸಿನಿಮಾ, ಅಧ್ಯಾಪನ ಅವರ ಇಷ್ಟದ ಕಾಯಕಗಳು. 'ನೀರೆಲ್ಲವೂ ತೀರ್ಥ' ಇವರ ಪ್ರಕಟಿತ ವಿಮರ್ಶಾ ಸಂಕಲನ. ಸದ್ಯ ಗದುಗಿನ ಕೆಎಲ್ಇ ಸಂಸ್ಥೆಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಗದಗ ಜಿಲ್ಲೆಯ ರೋಣ ತಾಲೂಕಿನ ಡ.ಸ. ಹಡಗಲಿ ಅವರ ಹುಟ್ಟೂರು.

ಅವನೌನ ಗಂಡ್ಕೆಲ್ಸ ಬಿಡಿದು. ಜಿಲ್ಲಾಕ ಜಿಲ್ಲಾನ ಹೌದ್ ಹೌದು ಅನ್ನುವಂಗ ಕೋಟ್ಯಾನುಕೋಟಿ ಮಂದಿಕೂಡಿ ನಂ ದುರ್ಗವ್ವನ ಜಾತ್ರೀ ಮಾಡೋ ಹೊತ್ತಿನ್ಯಾಗ ಪಡಪೋಶಿ ಎಮ್ಮೆಲೆ ಭಿಕ್ಷಾ ಯಾರಿಗ್ ಬೇಕು ಬಿಡ್ಲೇ ಪಡಿಯಾ' ಎಂದವನೇ ಕಪ್ಪುಬಸಿ ಕೆಳಗಿಟ್ಟು ಉದ್ರಿ ಹಚ್ಕೋರೀ ಸಾಹೇಬ್ರ ಎನ್ನುತ್ತಾ ಕಾಲಾಗಿದ್ದ ಹಂಡನಾಯಿ ಬಾಲಾ ತುಳಿಯುತ್ಲೇ ಅದು ಕಯ್ ಕಯ್ ಅನ್ಕೊಂತ ಹೊರಬಿತ್ತು. ಪೂಜಾರಿನೂ ಗುಡಿ ಕಡೆ ನೆಡದ.

ಜಿಂದೇಸಾಬನ ಚಾದಂಗಡಿಯಲ್ಲಿ ಪಡಿಯಾ ಆಡಿದ ಮಾತುಗಳು ಊರ ಸಂದಿಗೊಂದಿಗಳ ತಲುಪಿ ಗಂಭೀರ ಸ್ವರೂಪ ಪಡೆದುಕೊಂಡವು. ಊರಿನ ಚಾದಂಗಡ್ಯಾಗ ಚುಮ್ಮಾರಿ ಬಾಯಾಡಸ್ತ, ಗುಟುಕು ಚಾ ಹೀರಾವನಿಗೂ, ಮೂರುಸಂಜೀಮುಂದ ಹೇಲಿಕೆರೆಯೊಳಗ ಚರಿಗಿ ಮುಂದಿಟ್ಟು ತುದಿಗಾಲ ಮೇಲೆ ಕೂತು ತಿಣುಕಾಡುತ್ತಿರುವವನ ತ್ಯಲ್ಯಾಗೂ, ಹಾಲಿನ ಡೈರಿ ಲೈನಿನ್ಯಾಗ ನಿಂತ ಹೆಣ್ಮಕ್ಕಳ ಮಾತಿನ್ಯಾಗೂ ಪಡಿಯಾನ ಮಾತುಗಳು ಸುತ್ ಹೊಡೀತಿದ್ವು. 'ಏನ್ ಕೇಡುಗಾಲ ಬಂತಂತೀನಿ ಊರಿಗೆ, ಸುತ್ತಹತ್ತೂರಿನ್ಯಾಗೂ ಊರನ ದೇವ್ರ ದ್ವಾರಬಾಗಿಲದ ಮ್ಯಾಗ ಕುಂತಾವು. ನಮ್ಮೂರಾಗೇನಿದೂ ಕೇರೆನ ದೇವು ಹುಲಿಗೆವ್ವನ ಕೂರಿಸ್ತಾರಂತ. ಎಲ್ಲೂ ಕಾಣಲಾರದ್ದು ಬಿಡಿದು. ನಮ್ಮೂರ ಅಬ್ರೂ ಕಳೀಯಾಕ ನಿಂತಾವಿವು ಕೇರಿಯೊಳಗಿನ ಕುಲಗೇಡಿಗಳು' ಪಡಿಯಾನ ಮಾತುಗಳಿಗೆ ಊರವರ ಪ್ರತಿಕ್ರಿಯೆಗಳಿವು.

ಪಡಿಯಾನ ಮಾತುಗಳನ್ನು ಊರಜನ ಗಂಭೀರವಾಗಿ ಸ್ವೀಕರಿಸಲು ಕಾರಣಗಳಿದ್ದವು. ಈತ ಊರವರನ್ನು ಎದುರು ಹಾಕಿಕೊಂಡ ಕಥೆ ಇವತ್ತು ನಿನ್ನೆಯದಲ್ಲ. ಇದೇ ಕಾರಣಕ್ಕೆ ಊರುಬಿಟ್ಟು ಮತ್ತೇ ಊರು ಸೇರಿದವ. ಪಡಿಯಾ ಸಾವ್ಕಾರನ ಎದಿಗೊದ್ದು ದಕ್ಕಸ್ಗೊಂಡ ಕಥಿ ಸುತ್ತಲ ಊರಿಗೆಲ್ಲ ಹಬ್ಬಿತ್ತು. ಹರೇದಾಗ ಊರವರ ಮುಂದ ತಲೀ ಡಗ್ಗಸ್ದಂಗ ಕೂದಲು ಹಾರಾಡಿಸ್ತ ಕಾಲೇಜು ಮೆಟ್ಟಿಲು ಹತ್ತಿದ ಆಕಳ ಸ್ವಭಾವದ ಪಡಿಯಾನ ಬದುಕಿನಲ್ಲಿ ನಡೆದ ಅದೊಂದು ಘಟನೆ ಊರವರೊಂದಿಗೆ ಜಿದ್ದಿಗ್ ಬಿದ್ದು ಬಾಳೇವು ಸಾಗಿಸಾಕ ಕಾರಣಾಗಿತ್ತು.

ಅಗಸ್ಟ್ ಪಂದ್ರಾ ದಿನ ಊರಿನ ಸರ್ಕಾರಿ ಹೈಸ್ಕೂಲ್ ಹುಡ್ರೆಲ್ಲ ಡ್ರಂ ಸೆಟ್ ಡಗ್ಗಾ ಸಮೇತ ಪ್ರಭಾತಪೇರಿ ಹೊರಟಿದ್ರು. ಬಿಸಿಲೇರುವ ಹೊತ್ತಿಗೆ ಕೇರಿಯನ್ನು ಪ್ರವೇಶಿಸಿದ ಹುಡುಗರ ಜೋಶ್ ಕಡಿಮೆಯಾಗಿರಲಿಲ್ಲ. ತಾಪ ತಾಳಲಾರದೇ ತಲೆಸುತ್ತು ಬಂದ ಊರಹುಡುಗಿಯೊಬ್ಬಳು ದರಾಶಾಯಿಯಾಗಿ ಪ್ರಜ್ಞೆ ತಪ್ಪಿ ನೆಲಕ್ಕುರುಳಿದಳು. ಹುಡುಗರೆಲ್ಲ ಸುತ್ತುವರೆಯುವ ಹೊತ್ತಿಗೆ ಅಲ್ಲೇ ನಿಂತಿದ್ದ ಪಡಿಯಾ ತನ್ನ ಮನೆ ಹೊಕ್ಕವನೇ ನೀರು ತಂದು ಅವಳ ಮುಖ, ತಲೆಗೆ ಚಿಮ್ಮರಿಸತೊಡಗಿದ. ಇನ್ನೂ ಸುಧಾರಿಸಿಕೊಳ್ಳಲೆಂದು ಆಕೆಯನ್ನು ಎತ್ತಿ ಕಟ್ಟೆಯ ಮೇಲೂ ಮಲಗಿಸಿ ಉಪಚರಿಸಿದ. ಎಚ್ಚರಗೊಂಡ ಆಕೆ ಸ್ವಲ್ಪ ನೀರು ಕುಡಿದು ಸಾಲೀ ಟೀಚರ್ ಜೊತೆಗೆ ಮೆರವಣಿಗೆ ಸೇರಿಕೊಂಡಳು.

ಲೋಕೋಪಕಾರದ ಪಡಿಯಾನ ಈ ಕೆಲಸದ ಪರಿಣಾಮ ತಿಳಿದಿದ್ದು ಮನೀವರ್ಗೂ ಸಾವ್ಕಾರ ರುದ್ರಗೌಡ ಗಂಡುಗಚ್ಚಿ ಹಾಕಿ ಹಣಿಸಿದ ಕೊಡ್ಲಿ ತಗೊಂಡು ಬಂದು ನಿಂತಾಗ್ಲೇ. 'ಲೇ ಹಡಬಿಟ್ಟಿ ಸೂ... ಮಗ್ನ ಪಡಿಯಾ, ಯಾರನ್ ಕೇಳಿ ನನ್ ಮಗಳ ಮೈ ಮುಟ್ಟಿದ್ಲೇ, ಸತ್ರ ಸಾಯ್ತಿದ್ಲು, ನಿಮ್ ಮನೀ ನೀರು ಕುಡಿಸಿ ಕುಲ ಹಾಳ ಮಾಡಿದೇನ್ಲೇ, ಊರುಕೇರಿ ಒಂದ್ಮಾಡೋಕ ಹತ್ತೀಯೇನ್ಲೇ ದಿಕ್ಕೇಡಿ. ಬಿದ್ದಾಕೀನ್ ಎತ್ತಾಕ ಊರನ್ನಾರು ನೂರು ಮಂದಿದ್ರೂ ನಿಂದೇನ್ಲೇ ಕತ್ತೀಬಿಜಿ. ಅಡಿಗಿಮನಿ ಬಿಟ್ ಹೊರಗ್ ಬಾ ಗಂಡ್ಸಾ